**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್.ಸಿ.ನಂ. 193/2019**

**ಸಿ.ಡಬ್ಲ್ಯೂ–3 ಪಿ.ಡಬ್ಲ್ಯೂ–6**

**ದಿಃ 28.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಪೂರ್ಣ ಹೆಸರು | : | ಕಿರಣ ಸಿಂಗಾಡಿ ಬಾಗಿ |
| ವಯಸ್ಸು | : | 43 ವರ್ಷ. |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ತೇರದಾಳ |

**ಮುಖ್ಯ ವಿಚಾರಣೆಃ–** ಮಾನ್ಯ ಸರಕಾರಿ ಅಭಿಯೋಜಕರವರಿಂದಃ–

1) ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯನ್ನು ಈ ಮೊದಲು ನೋಡಿಲ್ಲ.

2) ಈಗ್ಗೆ 4–5 ವರ್ಷಗಳ ಹಿಂದೆ ಹಾರೂಗೇರಿ ಪೋಲಿಸ ಠಾಣೆಯಲ್ಲಿ ಒಂದು ದಾಖಲೆಯ ಮೇಲೆ ನನ್ನ ಸಹಿ ಪಡೆದರು. ಅಲ್ಲಿಂದ ಎಲ್ಲಿಗೂ ಕರೆದುಕೊಂಡು ಹೋಗಿಲ್ಲ ನನ್ನ ಸಮಕ್ಷಮ ಯಾವುದೇ ಸ್ಥಳ ಪರಿಶೀಲನೆ ಮಾಡಿಲ್ಲ ಹಾಗೂ ಯಾವುದೇ ವಸ್ತು ಜಪ್ತು ಮಾಡಿಕೊಂಡಿಲ್ಲ. ಆದರೆ ಒಂದು ಪೋಟೋ ತೆಗೆದುಕೊಂಡಿದ್ದಾರೆ.

3) ಸಾಕ್ಷಿಗೆ ಪಂಚನಾಮೆ ಮೇಲಿನ ತನ್ನ ಸಹಿ ತೋರಿಸಲಾಗಿ ನೋಡಿ ಒಪ್ಪಿಕೊಂಡಿದ್ದು, ಪಂಚನಾಮೆಯನ್ನು ಈಗಾಗಲೇ ನಿ.ಪಿ.3 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿ.ಪಿ.3(ಸಿ) ಎಂದು ಗುರುತಿಸಲಾಯಿತು. ಅದರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ. ಪೋಲೀಸರು ಸಹಿ ಹಾಕು ಎಂದಿದ್ದರಿಂದ ಹಾಕಿದ್ದೇನೆ.

4) ಸಾಕ್ಷಿಗೆ ನಿ.ಪಿ.4 ಮತ್ತು 5 ಛಾಯಾಚಿತ್ರಗಳನ್ನು ತೋರಿಸಲಾಗಿ, ಅದರಲ್ಲಿ ತನ್ನ ಭಾವಚಿತ್ರ ನೋಡಿ ಗುರುತಿಸಿರುತ್ತಾರೆ, ಅವುಗಳನ್ನು ಯಾರು, ಎಲ್ಲಿ ಹಾಗೂ ಯಾವ ವಿಚಾರವಾಗಿ ತೆಗೆದಿದ್ದಾರೆಂದು ಗೊತ್ತಿಲ್ಲ.

5) ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಮು.ಮಾ.1, 2 ಮಾದರಿ ಶ್ರೀಗಂಧದ ಕಟ್ಟಿಗೆ ತುಂಡುಗಳನ್ನು ತೋರಿಸಲಾಗಿ, ಅವುಗಳನ್ನು ಯಾರು ಹಾಗೂ ಎಲ್ಲಿಂದ ಜಪ್ತು ಪಡಿಸಿಕೊಂಡಿದ್ದಾರೆಂದು ಗೊತ್ತಿಲ್ಲವಾಗಿ ನುಡಿಯುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಮಾನ್ಯ ಸರಕಾರಿ ಅಭಿಯೋಜಕರು ಕೋರಿದ್ದು, ಪರಿಶೀಲಿಸಿ, ಅನುಮತಿಸಲಾಯಿತು)**

**ಪಾಟೀ ಸವಾಲುಃ– ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

1) ದಿನಾಂಕಃ 26.04.2018 ರಂದು ಬೆಳಗ್ಗೆ 09.20 ಗಂಟೆ ಸುಮಾರಿಗೆ ಚಾ.ಸಾ 1 ರವರು ಚಾ.ಸಾ 7 ರವರ ಮುಖಾಂತರ ನನ್ನನ್ನು ಹಾಗೂ ಚಾ.ಸಾ.2 ರವರನ್ನು ಹಾರೂಗೇರಿ ಪೋಲಿಸ ಠಾಣೆಗೆ ಕರೆಸಿಕೊಂಡು ಮುಗಳಖೋಡ ಗ್ರಾಮ ಹದ್ದಿಯಲ್ಲಿ ಶ್ರೀಗಂಧದ ಕಟ್ಟಿಗೆ ತುಂಡುಗಳನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿದ್ದಾರೆ ಈ ಕುರಿತು ಪಂಚರಾಗಿ ಎಂದು ಚಾ.ಸಾ 1 ಕೇಳಿಕೊಂಡರು ಅನ್ನುವದು ಸರಿಯಲ್ಲ. ನಂತರ ಬೆಳಗ್ಗೆ 09.30 ಗಂಟೆಗೆ ನಾನು, ಚಾ.ಸಾ 2, ಚಾ.ಸಾ 1 ಹಾಗೂ ಚಾ.ಸಾ. 6 ಮತ್ತು 7 ಎಲ್ಲರೂ ಕೂಡಿಕೊಂಡು ಸರ್ಕಾರಿ ಜೀಪನಲ್ಲಿ ಠಾಣೆಯಿಂದ ಹೊರಟು ಬೆಳಗ್ಗೆ 10.00 ಗಂಟೆ ಸುಮಾರಿಗೆ ಮುಗಳಖೋಡ ಐ.ಬಿ ಹತ್ತಿರ ಹೋದೆವು ಅನ್ನುವದು ಸರಿಯಲ್ಲ. ಅಲ್ಲಿ ಐ.ಬಿ ಹತ್ತಿರ ಜೀಪ ನಿಲ್ಲಿಸಿ ಮುಗಳಖೋಡ ಊರಿನ ಕಡೆಗೆ ಹೋಗುವ ರಸ್ತೆ ಪಕ್ಕದಲ್ಲಿ ಬ್ರಿಡ್ಜ ಹತ್ತಿರ ನಾವು ಮರೆಯಾಗಿ ನಿಂತುಕೊಂಡು ವಾಚ್ ಮಾಡುತ್ತಿದ್ದಾಗ ಬೆಳಗ್ಗೆ 10.00 ಗಂಟೆಗೆ ಕಮಾಣ ಗೇಟ ಕಡೆಯಿಂದ ಜಿ ಎಲ ಬಿ ಸಿ ಕೆನಾಲ ಪಕ್ಕದ ರಸ್ತೆ ಮುಖಾಂತರ ಒಂದು ಮೋಟಾರಸೈಕಲ ಮೇಲೆ ಇಬ್ಬರು ವ್ಯಕ್ತಿಗಳು ಬರುತ್ತಿದ್ದರು ಅನ್ನುವದು ಸರಿಯಲ್ಲ. ಆ ಮೋಟಾರಸೈಕಲನ ಪೆಟ್ರೋಲ ಟ್ಯಾಂಕ ಮೇಲೆ ಒಂದು ನೀಲಿ ಬಣ್ಣದ ಚೀಲ ಇತ್ತು ಅನ್ನುವದು ಸರಿಯಲ್ಲ. ಪೋಲಿಸರು ಸಂಶಯ ಬಂದು ಮೋಟಾರಸೈಕಲ ನಿಲ್ಲಿಸಿದಾಗ ಹಿಂದೆ ಕುಳಿತವನು ಓಡಿ ಹೋದನು

ಅನ್ನುವದು ಸರಿಯಲ್ಲ. ಮೋಟಾರಸೈಕಲ ನಡೆಸುತ್ತಿದ್ದ ವ್ಯಕ್ತಿಯ ಹೆಸರು ಕೇಳಲಾಗಿ ಆತನು ತನ್ನ ಹೆಸರು ವಿಠ್ಠಲ ರಾಮಪ್ಪಾ ಮಾಂಗ ಎಂದು ಹೇಳಿದನು ಅನ್ನುವದು ಸರಿಯಲ್ಲ. ಓಡಿ ಹೋದ ವ್ಯಕ್ತಿಯ ಹೆಸರು ಬಸವರಾಜ ಕಲ್ಲಪ್ಪಾ ಗಂಜ್ಯಾಳಿ ಎಂದು ಹೇಳಿದನು ಅನ್ನುವದು ಸರಿಯಲ್ಲ. 1ನೇ ಆರೋಪಿಯನ್ನು ಚೀಲದಲ್ಲಿ ಏನಿದೆ ಎಂದು ಕೇಳಿದಾಗ ಆತನು ತಡವರಿಸುತ್ತಾ ಶ್ರೀಗಂಧದ ಕಟ್ಟಿಗೆ ತುಂಡುಗಳು ಎಂದು ಹೇಳಿದನು ಎಂದರೆ ಸರಿಯಲ್ಲ. ನಂತರ ಬಸವರಾಜ ಸದರಿ ಶ್ರೀಗಂಧದ ಕಟ್ಟಿಗೆ ತುಂಡುಗಳನ್ನು ಕಳ್ಳತನ ಮಾಡಿಕೊಂಡು ತಂದಿರುತ್ತಾನೆ ಅವುಗಳನ್ನು ನಾವಿಬ್ಬರೂ ಕೂಡಿಕೊಂಡು 3ನೇ ಆರೋಪಿಗೆ ಕೊಡಲು ಹೊರಟಿದ್ದೇವು ಎಂದು 1ನೇ ಆರೋಪಿ ಹೇಳಿದನು ಅನ್ನುವದು ಸರಿಯಲ್ಲ. ನಂತರ ಪೋಲಿಸರು 1ನೇ ಆರೋಪಿಯನ್ನು ದಸ್ತಗೀರ ಮಾಡಿ ಚೀಲದಲ್ಲಿದ್ದ ಎಲ್ಲ ಶ್ರೀಗಂಧದ ಕಟ್ಟಿಗೆಳನ್ನು, ಮೋಟಾರಸೈಕಲ ಮತ್ತು ಚೀಲನ್ನು ವಶಪಡಿಸಿಕೊಂಡು ಸದರಿ ಶ್ರೀಗಂಧದ ಕಟ್ಟಿಗೆಗಳನ್ನು ತೂಕ ಮಾಡಿದಾಗ ಅವು 5 ಕೆಜಿ 100 ಗ್ರಾಂ ಇದ್ದವು ಅನ್ನುವದು ಸರಿಯಲ್ಲ. ಆ ತುಂಡುಗಳ ಪೈಕಿ ಈಗ ತೋರಿಸಿದ ಮು.ಮಾ.1 ಮತ್ತು 2 ಶಾಂಪಲ ಎಂದು ತೆಗೆದರು ಅನ್ನುವದು ಸರಿಯಲ್ಲ. ಅಲ್ಲಿ ಪೋಲಿಸರು ಮುಂಜಾನೆ 10.20 ರಿಂದ 11.30 ಗಂಟೆಯವರೆಗೆ ನಿ.ಪಿ 3 ರಂತೆ ಪಂಚನಾಮೆ ಮಾಡಿ ನಿ.ಪಿ 4 ಮತ್ತು 5 ಪೋಟೋಗಳನ್ನು ತೆಗೆದಿದ್ದಾರೆ ಅನ್ನುವದು ಸರಿಯಲ್ಲ.

2. ಸದರಿ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಕೂಡ ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ- ಆರೋಪಿತರ ಪರ ಏನೂ ಇಲ್ಲ.**

**ಮರು ವಿಚಾರಣೆ** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.